**ಸಾಕ್ಷಿದಾರರನ್ನು ದಿನಾಂಕಃ 23-01-2020 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿಯರ ಪರ ಜಿ ಬಿ ಎನ್ ವಕೀಲರಿಂದ

ಚಿಕ್ಕನರಗುಂದ ಗ್ರಾಮದ ರಿ ಸ ನಂ.208/3 ಬಿ ರ ಮಾಲಿಕರು ಪ್ರತಿವಾದಿಯರು ಎಂದರೆ ಸರಿ. ರಿ ಸ ನಂ.208/3 ಬಿ ಪೈಕಿ ಉತ್ತರ-ದಕ್ಷಿಣ ಶೀಲು ಮಾಡಿ ದಕ್ಷಿಣ ಕಡೆಗೆ ಹೊಂದಿ ಇರುವ ಜಾಗೆಯನ್ನು ನಮ್ಮ ತಂದೆಯವರು ಪ್ರತಿವಾದಿ ನಂ.1 ರವರಿಂದ ಖರೀದಿ ಹಿಡಿದಿರುತ್ತಾರೆ ಎಂದು ತೋರಿಸಲು ನಾನು ಮೂಲ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರ ಮಾಡಿರುವುದಿಲ್ಲ ಆದರೆ ಅದರ ಝರಾಕ್ಸ ಪ್ರತಿಯನ್ನು ಹಾಜರ ಮಾಡಿರುತ್ತೇನೆ. ನಮ್ಮ ತಂದೆಯವರು ಖರೀದಿ ಹಿಡಿದ ಜಾಗೆಯ ಮೇಲೆ ನವಲಗುಂದದ ಸಿಂಡಿಕೇಟ ಬ್ಯಾಂಕನಲ್ಲಿ ನಾವು ಸಾಲವನ್ನು ತೆಗೆದುಕೊಂಡಿರುತ್ತೇವೆ. ನಮ್ಮ ತಂದೆಯವರು ಖರೀದಿ ಹಿಡಿದ ಜಾಗೆಯ ಖರೀದಿ ಪತ್ರ 2007 ನೇ ಸಾಲಿನವರೆಗೆ ಇತ್ತು. ಸದರಿ ಖರೀದಿ ಪತ್ರ 2007 ನೇ ಸಾಲಿನವರೆಗೆ ಆದರೆ ನಾವು ಸಾಲವನ್ನು ಮರು ಪಾವತಿ ಮಾಡಿದ ನಂತರ ಸದರಿ ಖರೀದಿ ಪತ್ರವನ್ನು ಬ್ಯಾಂಕನಿಂದ ಮರಳಿ ಪಡೆದಿರುವುದಿಲ್ಲ ತಹಶೀಲ್ದಾರ ನರಗುಂದರವರು ಝರಾಕ್ಸ ಪ್ರತಿಯ ಮೇಲೆ ನಿಜ ಪ್ರತಿ ಅಂತಾ ಸಹಿ ಮಾಡಿದಾಗ ನನ್ನ ಹತ್ತಿರ ಮೂಲ ಖರೀದಿ ಪತ್ರ ಇರಲಿಲ್ಲ ಆದರೆ ಅದರ ಝರಾಕ್ಸ ಪ್ರತಿ ಇತ್ತು. ನಾನು ನ್ಯಾಯಾಲಯ ಮೂಲ ಖರೀದಿ ಪತ್ರವನ್ನು ಹಾಜರ ಮಾಡಲು ಹೇಳಿದ್ದರೂ ಸಹ ಹಾಜರ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು 3-4 ಸಲ ಬ್ಯಾಂಕಿಗೆ ಹೋಗಿ ಮೂಲ ಖರೀದಿ ಪತ್ರವನ್ನು ಮರಳಿ ಕೊಡಲು ಕೇಳಿದ್ದರೂ ಸಹ ಅವರು ಕೊಡಲಿಲ್ಲ ಎಂದು ನುಡಿಯುತ್ತಾರೆ. ಬ್ಯಾಂಕಿಗೆ ಖರೀದಿ ಪತ್ರವನ್ನು ಮರಳಿ ಕೊಡಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆದರೆ ಬ್ಯಾಂಕಿನವರು ನನಗೆ ಮೂಲ ಖರೀದಿ ಪತ್ರವನ್ನು ಕೊಟ್ಟಿರುವುದಿಲ್ಲ ಮತ್ತು ಯಾವುದೆ ಹಿಂಬರಹವನ್ನು ಸಹ ಕೊಟ್ಟಿರುವುದಿಲ್ಲ ಪ್ರತಿವಾದಿ ನಂ.1 ರವರ ಕಡೆಯಿಂದ ನನ್ನ ತಂದೆಯವರು ರಿ ಸ ನಂ.208/3 ಬಿ ರ ಪೈಕಿ ಸ್ವಲ್ಪ ಜಾಗವನ್ನು ಖರೀದಿ ಮಾಡಿರುವುದಿಲ್ಲ ಆದ್ದರಿಂದ ನಾವು ಮೂಲ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯವರು ರಿ ಸ ನಂ.208/3 ಬಿ ಪೈಕಿ ಸ್ವಲ್ಪ ಜಾಗವನ್ನು ಖರೀದಿ ಮಾಡಿದ ಖರೀದಿ ಪತ್ರದ ಮೇಲೆ ನಾವು ನವಲಗುಂದ ಸಿಂಡಿಕೇಟ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡಿದ್ದೇವು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮುಂದೆ ಹಾಜರ ಮಾಡುತ್ತೇನೆ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಖರೀದಿ ಪತ್ರದ ಝರಾಕ್ಸ ಪ್ರತಿಯಲ್ಲಿ ತಿದ್ದುಪಡಿ ಮಾಡಲು ಬರುತ್ತದೆ

ಎಂದರೆ ಸಾಕ್ಷಿಯು ಆ ರೀತಿ ಮನಸ್ಯನು ನಾನು ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾವು ನ್ಯಾಯಾಲಯಕ್ಕೆ ಹಾಜರ ಮಾಡಿದ ಝುರಾಕ್ಸ ಖರೀದಿ ಪತ್ರವನ್ನು ನಾವೇ ಖೊಟ್ಟಿಯಾಗಿ ತಯಾರು ಮಾಡಿ ನ್ಯಾಯಾಲಯಕ್ಕೆ ಹಾಜರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೆ ವಿಪಿಸಿ ಆಸ್ತಿಯನ್ನು ಖರೀದಿ ಮಾಡಿದರೆ ಖರೀದಿ ಪತ್ರದ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಲಗ್ಗತ್ತಿಸಿ ಹೆಸರನ್ನು ನಮೂದು ಮಾಡಲು ಪಂಚಾಯತಿಯವರಿಗೆ ನೀಡುತ್ತಾರೆ ಎಂದರೆ ಸರಿ. ನಂತರ ಪಂಚಾಯತಿಯವರು ಠರಾವು ಮಾಡಿ ಖರೀದಿ ಮಾಡಿದ ವ್ಯಕ್ತಿಯ ಹೆಸರನ್ನು ಖರೀದಿ ಮಾಡಿದ ಆಸ್ತಿಗೆ ನಮೂದು ಮಾಡಬೇಕು ಅಥವಾ ಇಲ್ಲವೋ ಎಂದು ನಿರ್ಣಯಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಚಿಕ್ಕನರಗುಂದ ಗ್ರಾಮ ಪಂಚಾಯತಿಯಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಠರಾವು ಆಗಿರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದ ಠರಾವು ಪ್ರತಿಯನ್ನು ನಾವು ನ್ಯಾಯಾಲಯಕ್ಕೆ ಹಾಜರ ಮಾಡಿರುವುದಿಲ್ಲ. ಸದರಿ ಠರಾವು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಲು ನನಗೆ ಯಾವುದೆ ತೊಂದರೆ ಇರುವುದಿಲ್ಲ ಎಂದರೆ ಸರಿ. ಠರಾವು ಪಾಸು ಮಾಡಬೇಕಾದರೆ ಸದರಿ ಠರಾವದಲ್ಲಿ ಆಸ್ತಿಯ ಕ್ಷೇತ್ರವನ್ನು ನಮೂದು ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಎಷ್ಟು ಕ್ಷೇತ್ರದಲ್ಲಿ ಇರುತ್ತದೆ ಎಂದು ತೋರಿಸಲು ನಾವು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರ ಮಾಡಿರುವುದಿಲ್ಲ. ಕ್ಷೇತ್ರ ತೋರಿಸುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರ ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ವಾದಪತ್ರ ಮತ್ತು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದಿಸಿದ ಚಕ್ಕುಬಂದಿಯಲ್ಲಿ ನನ್ನ ಮನೆ ಇರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರ ಮಾಡಿರುವುದಿಲ್ಲ ಎಂದರೆ ಸರಿ. ವಾದ ಪತ್ರದ ಜೊತೆ ಹಾಜರ ಮಾಡಿದ ಹಾತ ನಕಾಶೆಯನ್ನು ಯಾವ ದಾಖಲಾತಿಯ ಆಧಾರದ ಮೇಲೆ ನಮ್ಮ ವಕೀಲರು ಅದನ್ನು ತಯಾರಿಸಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಯರಿಗೆ ಸೇರಿದ ಆಸ್ತಿಯನ್ನು ಎತ್ತಿಹಾಕಬೇಕು ಎನ್ನುವ ದುರದ್ದೇಶದಿಂದ ವಾದ ಪತ್ರದ ಜೊತೆ ಹಾಜರ ಮಾಡಿದ ಹಾತ ನಕಾಶೆಯನ್ನು ನಾವು ಸೃಷ್ಟಿ ಮಾಡಿ ಹಾಜರ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಮ್ಮ ತಂದೆಯವರು ದಾವಾ ಆಸ್ತಿಯನ್ನು ಯಾವ ಸರ್ವೆ ನಂಬರದಿಂದ ಖರೀದಿ ಮಾಡಿರುತ್ತಾರೆ ಮತ್ತು ಅದಕ್ಕೆ ಯಾವ ವಿಪಿಸಿ ನಂಬರ ಬಿದ್ದಿರುತ್ತದೆ ಎಂದು ಪಂಚಾಯತಿಯಲ್ಲಿ ದಾಖಲಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಮಾಹಿತಿ ಇತ್ತು ಆದರೆ ಅವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವಾ ಹಾಕುವುದಕ್ಕೆ ಮುಂಚೆ ದಾವಾ ಆಸ್ತಿಗೆ ಯಾವ ಠರಾವಿನ ಆಧಾರದ ಮೇಲೆ ನನ್ನ ತಂದೆಯವರ ಹೆಸರು ದಾವಾ ಆಸ್ತಿಗೆ ನಮೂದು ಆಯಿತು ಎಂದು ನನ್ನ ಪಂಚಾಯತಿಯಲ್ಲಿ ವಿಚಾರಣೆ ಮಾಡಿರುತ್ತೇನೆ. ಸರಿದ ಠರಾವನ್ನು ನಾನು ನ್ಯಾಯಾಲಯಕ್ಕೆ ತಂದು ಹಾಜರ ಮಾಡುತ್ತೇನೆ. ನಾವು ಸಲ್ಲಿಸಿದ ವಾದ ಪತ್ರದಲ್ಲಿ ಹಾಗೂ ನಾನು ಸಲ್ಲಿಸಿದ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಉದ್ದ ಮತ್ತು ಅಗಲವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

ನಿಪಿ 1 ರಲ್ಲಿ ವಿಪಿಸಿ ನಂ.634 ರ ಕ್ಷೇತ್ರವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ . ನಿಪಿ 1 ರಲ್ಲಿ ಯಾವ ಠರಾವದ ಆಧಾರದ ಮೇಲೆ ನನ್ನ ತಂದೆಯ ಹೆಸರು ನಮೂದು ಆಗಿರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಯಾವುದೆ ಆಸ್ತಿಯ ತೆರಿಗೆಯನ್ನು ಪಂಚಾಯತಿಗೆ ಪಾವತಿ ಮಾಡಿದಾಗ ತೆರಿಗೆಯ ಮೂಲ ರಶೀದಿಯನ್ನು ತೆರಿಗೆ ಜಮಾ ಮಾಡಿದವರಿಗೆ ನೀಡುತ್ತಾರೆ ಎಂದರೆ ಸರಿ. ನಿಪಿ 14 ರಿಂದ 27 ತೆರಿಗೆ ಪಾವತಿಸಿದ ರಶೀದಿಗಳು ಕಾರ್ಬನ ಕಾಫಿಗಳು ಆಗಿರುತ್ತವೆ ಎಂದರೆ ಸರಿ. ನಿಪಿ 14 ಮತ್ತು 15 ಕರ ಪಾವತಿಸಿದ ರಶೀದಿಗಳಲ್ಲಿ ನಮ್ಮ ಮನೆಯ ನಂಬರ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು 315 ಅಂತಾ ನಮೂದು ಇರುತ್ತದೆ ಮತ್ತು ಸದರಿ ಮನೆ ನಮ್ಮದು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮನೆಯ ಉತಾರವನ್ನು ನಾನು ನ್ಯಾಯಾಲಯಕ್ಕೆ ಹಾಜರ ಮಾಡಿರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾಯಾಧೀಶರು, ನರಗುಂದ